KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. ಃ **26**

ದೋ.ಸಾ. ಃ **35**

ದಿ.**26.11.2025**

| | |
|---|---|
| ಹೆಸರು | ಃ ಪರಮಾನಂದ ಕಾಗಿ |
| ತಂದೆಯ ಹೆಸರು | ಃ ಸಿದ್ದರಾಯಿ |
| ವಯಸ್ಸು | ಃ **32** ವರ್ಷ |
| ಉದ್ಯೋಗ | ಃ ಪಿಸಿ ನಂ.**497,** ಹೆಬ್ಬೂರು ಪೋಲೀಸ್ ಠಾಣೆ |
| ವಾಸಸ್ಥಳ | ಃ ಹೆಬ್ಬೂರು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ದಿ.23.11.2021 ರಿಂದ ನಾನು ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.28.03.2023 ರಂದು ಕ್ಯಾತ್ಸಂದ್ರ ಪೋಲೀಸ್ ವೃತ್ತ ನಿರೀಕ್ಷಕರಾದ ಶ್ರೀ ಚನ್ನೇಗೌಡ ಆರ್.ಜಿ. ರವರು ತಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ಪಾಂಡುರಂಗ ಅಲಿಯಾಸ್ ಗಿರೀಶ್ ರವರ ಮೃತದೇಹದ ಶವ ತನಿಖೆಯನ್ನು ಜರುಗಿಸಿ, ಶವ ತನಿಖಾ ಕಾಲದಲ್ಲಿ ಸಂಗ್ರಹಿಸಿದ ಮೃತನ ರಕ್ತ, ವಿಸೆರಾ ಮತ್ತು ಬಟ್ಟೆಗಳನ್ನು ಶೇಖರಿಸಿ ತರಲು ನನ್ನನ್ನು ನೇಮಕ ಮಾಡಿದ್ದು, ಆ ಪ್ರಕಾರ ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಹೋಗಿ ಶವ ಪರೀಕ್ಷಾ ಕಾಲದಲ್ಲಿ ವೈದ್ಯರು ಸಂಗ್ರಹಿಸಿಕೊಟ್ಟ ಮೃತನ ಮೈಮೇಲಿದ್ದ ಬಟ್ಟೆಗಳು, ಮೃತನ ರಕ್ತ ವಿಸೆರಾ, ಒಟ್ಟು 9 ಐಟಂಗಳನ್ನು ಸಂಗ್ರಹಿಸಿ ಠಾಣೆಗೆ ಬಂದು ವೃತ್ತ ನಿರೀಕ್ಷಕರ ಮುಂದೆ

ಹಾಜರುಪಡಿಸಿರುತ್ತೇನೆ. ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಆ ವಸ್ತುಗಳನ್ನು ಸಂಗ್ರಹಿಸುವಾಗ ಮಾಡಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ30 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ30(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋವನ್ನು ನಿಶಾನೆ ಪಿ31 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನೋಡಿ ಗುರುತಿಸಿದ್ದೇನೆ. ಅವುಗಳನ್ನು ಈಗಾಗಲೇ ಮು ಮಾ 15 ರಿಂದ 18 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

**3.** ನನಗೆ ಮೌಖಿಕವಾಗಿ ಆದೇಶ ಮಾಡಿದ್ದರು. ಆ ವಸ್ತುಗಳನ್ನು ಹಾಜರುಪಡಿಸುವಾಗ ನಾನು ವರದಿಯನ್ನು ಕೊಟ್ಟಿಲ್ಲ.ದಿ.28.03.2023 ರಂದು ನನ್ನನ್ನು ನಾನು ಹೇಳಿದಂತಹ ಕರ್ತವ್ಯಕ್ಕೆ ನೇಮಕ ಮಾಡಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಮತ್ತು ನಾನು ಅವುಗಳನ್ನು ಸಿಪಿಐ ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು